ಓ .ಎಸ್ . ನಂ. 289/2021 ಪಿಡಬ್ಲ್ಯೂ: 1 ಶ್ರೀ ಸಿ. ವೆಂಕಟೇಶ್

ದಿನಾಂಕ : 06.04.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಶ್ರೀ ಎಂ ಎಸ್ ಕೆ ವಾದಿ ಪರ ವಕೀಲರಿಂದ:

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿರುತ್ತದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ನನ್ನ ದಾವೆಯ ಜೊತೆಗೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | | |
|---|---|---|
| 1 | ದಾವಾ ಸ್ವತ್ತಿಗೆ ಸಂಬಂಧಿಸಿದ 2021-22 ನೇ ಸಾಲಿನ ಎರಡು ಪುಟಗಳ ಗಣಕೀಕೃತ ಪಹಣಿ ಪತ್ರಿಕೆಗಳನ್ನು | ನಿಪಿ-1 ಮತ್ತು 2 |
| 2 | ನಾನು ನನ್ನ ವಕೀಲರ ಮೂಲಕ ಪ್ರತಿವಾದಿಗೆ ನೀಡಿರುವ ಕಾನೂನು ತಿಳುವಳಿಕೆ ನೋಟಿಸಿನ ಕಛೇರಿ ಪ್ರತಿಯನ್ನು | ನಿಪಿ-3 |
| 3 | ಸದರಿ ನೋಟಿಸನ್ನು ನೊಂದಾಯಿತ ಅಂಚೆ ಮೂಲಕ ರವಾನಿಸಿರುವ ರವಾನೆ ರಸೀದಿಯನ್ನು | ನಿಪಿ-4 |
| 4 | ಅಂಚೆ ಸ್ವೀಕೃತಿಯನ್ನು | ನಿಪಿ-5 |

ಎಂದು ಗುರುತಿಸಲಾಯಿತು.

ದಿನಾಂಕ 10.01.1989 ರ ನೋಂದಾಯಿತವಲ್ಲದ ಸ್ವಾಧೀನ ಸಹಿತ ಕ್ರಯದ ಕರಾರು ಪತ್ರವನ್ನು ನಿಶಾನೆಗೊಳಿಸುವಾಗ ಪ್ರತಿವಾದಿ ಪರ ವಕೀಲರು ತಕರಾರು ತೆಗೆದ ಕಾರಣ ವಿಲೆ ಇಡಲಾಗಿದೆ.

ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ರಘು. ಸಿ. ಜೆ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ